ಈಗವನ ಕಣ್ಣಲ್ಲಿ ಚಕಮಕಿ ಕಾಣಿಸಿತು. ಮುಖದ ಗೆರೆಗಳು ಆಳವಾದವು. ಒಂದೊಂದಾಗಿ ಮಾತಿನ ಪ್ರಹಾರಗಳನ್ನು ನನ್ನೆಡೆ ತೂರ ತೊಡಗಿದ್ದವನಿಗೆ ಇದ್ದಕ್ಕಿದ್ದಂತೆ ಒದೆ ಬಿದ್ದಿತ್ತು.

''ಹದಿನೈದು ವರ್ಷಗಳ ಹಿಂದೆ... ನಾನು ಸ್ವಲ್ಪ ದುಡುಕಿದ ಕಾರಣ ಒಂದು ಮಗುವಿನ ಪ್ರಾಣ ಹೋಯಿತು. ಅದೊಂದು ದೊಡ್ಡ ಕತೆ. ನಾನು ಸರ್ಜರಿ ಮುಗಿಸಿ, ವಾರ್ಡಿಗೆ ಸಾಗಿಸುವ ವೇಳೆಗೆ ಮಗುವಿನ ತುಟಿಗಳು ನೀಲಿಗಟ್ಟುತ್ತಿದ್ದವು... ತಕ್ಷಣ ಹೃದಯ ಪಂಪ್ ಮಾಡಿ ಏನೆಲ್ಲ ಮಾಡಿದರೂ ಮಗು ಸತ್ತು ಹೋಯಿತು. ಶ್ರೀಮಂತರ ಒಬ್ಬನೇ ಮಗ... ಅವತ್ತು ನರ್ಸ್‌ಗಳ ಮುಖ ಹೇಗಾಗಿತ್ತೆಂದರೆ ಅದನ್ನು ಇವತ್ತಿಗೂ ನನ್ನಿಂದ ಮರೆಯಲು ಸಾಧ್ಯವಿಲ್ಲ. ಮುಂದೆ ಕೇಸ್ ಕೋರ್ಟಿಗೆ ಹೋಯ್ತು... ನಾನು ಆಗ ನಿನ್ನಂತೆಯೇ ಇದ್ದವನು... ಕೋರ್ಟಿನಲ್ಲಿ ತಪ್ಪು ನನ್ನದೇ ಅಂತ ತೀರ್ಮಾನವಾಯ್ತು. ನಾನು ಮುಂದೆ ವೈದ್ಯಕೀಯ ಮಾಡುವಂತಿಲ್ಲ ಅಂತ ತಾಕೀತು ಮಾಡಿದರು.'' ಅಂತ ನಿಲ್ಲಿಸಿ ನನ್ನ ಮುಖ ನೋಡಿದ.

ಹಣದಾಸೆಗೆ ಹೆಚ್ಚು ಹೆಚ್ಚು ದುಡಿಯಲು ಪ್ರಯತ್ನಿಸಿದ್ದನೇನೋ? ದುರದೃಷ್ಟವಶಾತ್ ಅವನ ವಿಚಾರದಲ್ಲಿ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದ ಆರೋಪ ಮೈ ಮೇಲೆ ಬಂದು ಅವನ ವೈದ್ಯ ವೃತ್ತಿಯ ಲೈಸೆನ್ಸ್ ಹೋಗಿತ್ತು. ಸಮಯ ಕಡಿಮೆಯಾದಂತೆಲ್ಲ ಒತ್ತಡ ಹೆಚ್ಚಾಗುತ್ತದೆ. ತಪ್ಪುಗಳು ದುಪ್ಪಟ್ಟಾಗುತ್ತವೆ. ದುರಾಸೆ ವೈದ್ಯ ವೃತ್ತಿಯನ್ನೇ ಮೊಟಕುಗೊಳಿಸುತ್ತದೆ. ಹಿಂದಿನಿಂದಲೂ ಅವನದು ಇದೇ ಹಣದ ದುರಾಸೆಯ ಸ್ವಭಾವ ಇರಬಹುದು. ಅದೃಷ್ಟಕ್ಕೆ ಬಹುತೇಕ ವೈದ್ಯರು ತಾವು ಜಗಿಯಬಹುದಾದಕ್ಕಿಂತ ಹೆಚ್ಚು ಕಚ್ಚುವುದಿಲ್ಲ. ಅವನಂತೆ ಇರುವವರು ಅತಿ ವಿರಳ ಅನ್ನಿಸಿ ಸಮಾಧಾನವಾಯ್ತು.

ಅವನ ವೃತ್ತಿ ವೃತ್ತಾಂತ ನನಗೆ ತಿಳಿದ ವಿಚಾರವೇ ಆಗಿತ್ತು. ಅವನ ಬಗ್ಗೆ ಅಂತರ್ಜಾಲದಲ್ಲಿ ಹುಡುಕಾಡಿ ಹದಿನೈದು ವರ್ಷಗಳ ಹಿಂದೆ ಪತ್ರಿಕೆಗಳಲ್ಲಿ ಬಂದಿದ್ದ ವರದಿಗಳನ್ನು ನಾನು ಓದಿ ತಿಳಿದುಕೊಂಡಿದ್ದೆ. ಕತೆ ಕೇಳಿದ ನಂತರ ನನ್ನ ಮುಖದಲ್ಲಿ ಆಶ್ಚರ್ಯ, ಆಘಾತ ಮತ್ತು ಮರುಕ ಯಾವುದೂ ಮೂಡದ ಕಾರಣ ಅದವನಿಗೆ ತಿಳಿದಾಗಿತ್ತು. ನಾನು ಮತ್ತೂ ಕೆಲ ಕಾಲ ಸುಮ್ಮನಿದ್ದೆ.

ಹಿಂದೆ ನಡೆದ ಘಟನೆಯನ್ನು ಮುಚ್ಚಿಕೊಳ್ಳಲು ಹೋಗಿ ಗೌರವ ಕಳೆದುಕೊಳ್ಳದಿದ್ದರೂ ಹಿಂದಿನ ಬದುಕಿನ ಅಪ್ರಿಯ ಸತ್ಯ ಅವನ ಅಹಂ ಅನ್ನು ಕೆಳಗೆ ಕೆಡವಿತ್ತು. ಎಲ್ಲ ವೈದ್ಯರೂ ಯಾಕೆ ಅವನಂತೆಯೇ ತಮ್ಮ ಮಿತಿಗಳನ್ನು ಮೀರಿ ಹಣದ ಹಿಂದೆಯೇ ಬೀಳುವುದಿಲ್ಲ ಎಂಬುದಕ್ಕೆ ಉತ್ತರವನ್ನು ಅವನ ಬಾಯಿಂದಲೇ ಹೇಳಿಸಿದ್ದೆ. ಆದರೆ, ನನ್ನದೇ ಆಸ್ಪತ್ರೆಗಳನ್ನು ಕಟ್ಟದೆ, ಇನ್ನೊಬ್ಬರ ಕೈ ಕೆಳಗೆ ದುಡಿಯುತ್ತ ನನ್ನ ವಿರಾಮದ ವೇಳೆಯನ್ನು ಆಡಳಿತದ ತಕರಾರುಗಳಿಲ್ಲದೆ ಕಳೆಯುವ, ಸಣ್ಣ ಆದಾಯವನ್ನೇ ಹೆಮ್ಮೆಯಿಂದ ಒಪ್ಪುವ ನನ್ನಂತಹ ಅಲ್ಪತೃಪ್ತರ ಬಗ್ಗೆ ಅವನಿಗೆ ಗೌರವವಿದ್ದಂತಿರಲಿಲ್ಲ.

ಈ ಕಾರ್ಪೊರೇಟು ಸಂಭಾಷಣೆಯಲ್ಲಿ ಈಗವನು ಧನಾತ್ಮಕ ಸಂಭಾಷಣೆಯ ತಂತ್ರವನ್ನು ಹೂಡಿದ.

"ಆದದ್ದೆಲ್ಲ ನನ್ನ ಒಳಿತಿಗೇ ಅಂದುಕೋ. ಈಗ ನಾನು ಹನ್ನೊಂದು ಸರಣಿ ಆಸ್ಪತ್ರೆಗಳ ಒಡೆಯ. ಆಸ್ಪತ್ರೆಯನ್ನು ವೈದ್ಯರೇ ಅಲ್ಲದೆ ಯಾರು ಬೇಕಾದರೂ ನಡೆಸಬಹುದಲ್ಲ? ಜೊತೆಗೆ ನನ್ನ ಅನುಭವ ಇದ್ದೇ ಇರುತ್ತದೆ. ಹಿಂದೆಂದಿಗಿಂತಲೂ ಈಗ ಹೆಚ್ಚು ಶ್ರೀಮಂತನಾಗಿದ್ದೇನೆ, ಸಮಾರಂಭ ಭವನಗಳು, ರೆಸಾರ್ಟ್‌ಗಳೂ ಇವೆ'' ಅಂತ ಪಫರ್ ಮೀನಿನಂತೆ ಎದೆಯುಬ್ಬಿಸಿ ಅವನದೇ ಪುಟ್ಟ ಸಾಮ್ರಾಜ್ಯದ ನಮ್ರ ಸಾಮ್ರಾಟನಂತೆ ಕುಳಿತ.

ಅವನ ಈ ಸಾಮ್ರಾಜ್ಯಕ್ಕೆ ಅವನ ಏಕೈಕ ಮುದ್ದಿನ ಮಗಳು ಉತ್ತರಾಧಿಕಾರಿಯಾಗಿದ್ದಳು. ಓದು ತಲೆಗೆ ಹತ್ತದ ಅವಳನ್ನು ನರ್ಸಿಂಗ್ ಮಾಡಿಸುತ್ತಿದ್ದ. ಹಾಗಾದರೂ ಅವಳಿಗೆ ಈ ವ್ಯವಹಾರ